ಭವನದ ಕಚೇರಿಯಲ್ಲಿ ತನ್ನ ದಿನನಿತ್ಯದ ಜಾಗದಲ್ಲಿ ಕುಳಿತುಕೊಂಡು ಆ ದಿನದ ಫೈಲ್‌ಗಳನ್ನು ನೋಡುತ್ತಿದ್ದರೂ ಅವನ ಮನಸ್ಸು ಬೆಳಗ್ಗೆ ತನ್ನ ಮೂಗನ್ನು ಆವರಿಸಿದ್ದ ಆ ವಿಚಿತ್ರ ವಾಸನೆಯ ಸುತ್ತಲೇ ಗಿರಕಿ ಹೊಡೆಯುತ್ತಿತ್ತು. ಹೆಂಡತಿ ಅಡುಗೆಮನೆಯಿಂದ ಹೊರಗೆ ಹೋದ ತಕ್ಷಣ ಆ ವಿಚಿತ್ರ ವಾಸನೆ ಕೂಡ ಇಲ್ಲವಾದದ್ದು ಚಿದಂಬರನಿಗೆ ಏಕಕಾಲಕ್ಕೆ ಒಗಟಾಗಿಯೂ ಮತ್ತು ಸಮಸ್ಯೆಯಾಗಿಯೂ ಕಾಡಲಾರಂಭಿಸಿತು. ಪೂಜೆ ಪುನಸ್ಕಾರಗಳೆಂದು ದಿನಕ್ಕೆ ಎರಡು ಹೊತ್ತು ಸ್ನಾನ ಮಾಡುವ ಸಂಪ್ರದಾಯನಿಷ್ಠೆಯಾದ ಹೆಂಡತಿಯ ದೇಹ ಶುಚಿತ್ವದ ಕುರಿತು ಚಿದಂಬರನಿಗೆ ಯಾವ ಅನುಮಾನವೂ ಇರಲಿಲ್ಲ. ದಿನಪೂರ್ತಿ ತನಗಾದ ಆ ಅನುಭವದಿಂದ ಹೊರಬರಲಾಗದೆ ಕೆಲಸದಲ್ಲಿ ಏಕಾಗ್ರತೆ ಇಲ್ಲದಂತಾಗಿ ಹೀಗೆ ತಾನು ಕಚೇರಿಯ ಕೆಲಸದಲ್ಲಿ ಹಿಂದೆಂದೂ ಅಸಡ್ಡೆ ಮಾಡಿಲ್ಲವೆನ್ನುವುದು ಅರಿವಾಗಿ ಅಸ್ವಸ್ಥನಾದ.

ಸಂಜೆ ಕೆಲಸದಿಂದ ಮರಳಿದ ಚಿದಂಬರ ಮನೆಯನ್ನು ಪ್ರವೇಶಿಸಿದ್ದೇ ಹಾಲ್‌ನಲ್ಲಿ ನಿಂತು ದೀರ್ಘವಾಗಿ ಉಸಿರೆಳೆದುಕೊಂಡವನು ಆ ವಿಚಿತ್ರ ವಾಸನೆ ಇಲ್ಲದೆ ಮನೆಯ ವಾತಾವರಣ ಎಂದಿನಂತೆ ಸಹಜ ಸ್ಥಿತಿಯಲ್ಲಿದೆಯೆಂದು ಮನಸ್ಸಿಗೆ ಸಮಾಧಾನ ತಂದುಕೊಂಡ. ಬಟ್ಟೆ ಬದಲಿಸಿ ಮುಖ ತೊಳೆದು ಬಂದವನ ಎದುರು ಚಹಾದ ಕಪ್ಪು ಹಿಡಿದು ನಿಂತಿದ್ದ ಹೆಂಡತಿ ಕಾಣಿಸಿದ್ದೇ ವಿಚಿತ್ರ ವಾಸನೆ ಮೂಗನ್ನು ಆವರಿಸಿದಂತಾಗಿ ತಲ್ಲಣಗೊಂಡ. ಹೆಂಡತಿಯ ಆರೋಗ್ಯದಲ್ಲೇನಾದರೂ ಏರುಪೇರಾಗಿರಬಹುದೇನೋ ಎನ್ನುವ ಸಂಗತಿ ಮನಸ್ಸಿನಲ್ಲಿ ಹೊಳೆದು, ಹಾಗೆ ಹೊಳೆದ ಯೋಚನೆಯಿಂದ ಅವನು ಅದೆಷ್ಟು ದಿಗಿಲುಗೊಂಡನೆಂದರೆ ಚಹಾ ಕುಡಿಯುವುದನ್ನೂ ಮರೆತು ನೇರವಾಗಿ ಮಲಗುವ ಕೋಣೆಗೆ ಹೋಗಿ ಮಂಚದ ಮೇಲೆ ಮೈಚಾಚಿದ. ಗಂಡನ ಇವತ್ತಿನ ವರ್ತನೆ ಪದ್ಮಾವತಿಗೆ ವಿಚಿತ್ರವಾಗಿಯೂ ಮತ್ತು ಒಗಟಾಗಿಯೂ ತೋರಿತು.

ರಾತ್ರಿ ಊಟ ಬಡಿಸುವಾಗ ಪದ್ಮಾವತಿ ತನ್ನ ಮನದ ಬೇಗುದಿಯನ್ನು ಸಿಟ್ಟಿನಿಂದಲೇ ಹೊರಹಾಕಿದ್ದಳು ‘ಲಗ್ನಾಗಿ ಹತ್ತು ವರ್ಷಗಳಾಯ್ತು. ಸ್ವಂತಕ್ಕ ಅಂತ ಒಂದು ಮನಿ ಮಾಡ್ಕೊಳ್ಳಲಿಕ್ಕ ಆಗಿಲ್ಲ. ಶೇಷಗಿರಿ ಪುರೋಹಿತ ಹೇಳತಿದ್ದ ಅದೇನೋ ಬಿಲ್ಡಿಂಗ್ ಕಾಮಗಾರಿದು ಬಿಲ್ ನಿಮ್ಮ ಟೇಬಲ್‌ಗಿ ಬಂದದಂತ. ಎಲ್ಲಾ ಸರಿ ಅದಾ ಅಂತ ಷರಾ ಬರೆದು ರುಜು ಹಾಕಿದರ ಮುಗಿತಂತ. ಕಾಂಟ್ರಾಕ್ಟರ್ ಹಾದಿಮನಿ ಮಾಮೂಲಿ ಅಂತ ಸ್ವಲ್ಪ ಹೆಚ್ಚಿಗಿನೆ ಕೊಡಲಿಕ್ಕ ತಯ್ಯಾರದಾನಂತ. ಆದ್ರ ನೀವೇನೋ ಕೆಲಸ ಸರಿ ಆಗಿಲ್ಲ ಅಂತ ತಕರಾರು ತೆಗದಿರಂತ. ನಿಮಗ ಹ್ಯಾಗ ಬುದ್ಧಿ ಹೇಳ್ಬೇಕು ನಂಗಂತೂ ತಿಳಿವಲ್ಲದಾಗ್ಯಾದ. ನೌಕರಿ ಅಂತ ಹೇಳಲಿಕ್ಕಿ ಅದಾ, ಸುಡಗಾಡು ನಿಮ್ಮ ಈ ನೌಕರಿಯಿಂದ ನಾವೇನು ತುಪ್ಪದಾಗ ಕೈತೊಳಲಿಕ್ಕತ್ತಿಲ್ಲ. ಉಪ್ಪಿಗಿದ್ದರ ಎಣ್ಣೆಗಿಲ್ಲ, ಎಣ್ಣೆಗಿದ್ದರ ಉಪ್ಪಿಗಿಲ್ಲ ಹಾಂಗ ಬಾಳಲಿಕತ್ತೀವಿ. ಮಕ್ಕಳ ಓದು, ಮುಂಜಿ, ಮದುವಿ, ಬಸಿರು, ಬಾಣಂತನ ಅಂತ ಖರ್ಚೆಲ್ಲ ಮುಂದೆ ಅದಾವ. ಮುಪ್ಪಿನ ಕಾಲಕ್ಕ ಇರಲಿ ಅಂತ ಒಂದಿಷ್ಟು ದುಡ್ಡಿನ ಆಸರಿ ಆದರೂ ಬೇಕು. ಆಸ್ತಿ ದುಡ್ಡು ಅಂತ ಇದ್ದರ ಮುಪ್ಪಿನ ಕಾಲದಾಗ ಯಾರಾದರೂ ಬಂದು ನೋಡಿಕೊಳ್ತಾರ. ನಿಮಗ ಧಡಧಡ ಮಾತಾಡ್ಲಿಕ್ಕಿ ಆಗಲಿಲ್ಲಂದರ ಹೇಳ್ರಿ. ನಾನೇ ಬಂದು ಹಾದಿಮನಿ ಜೊತಿಗಿ ಮಾತಾಡ್ತೀನಿ’. ಹೆಂಡತಿ ಮಾತಿಗೆ ಚಿದಂಬರ ಥಕ್ಕಾಗಿ ಹೋದ. ‘ಆಯ್ತು ನಾಳೆ ನಾನೆ ಮಾತಾಡಿ ಫೈನಲ್ ಮಾಡಿ ಫೈಲ್ ಕ್ಲೋಸ್ ಮಾಡ್ತೀನಿ’ ಹೆಂಡತಿಯ ಸಮಾಧಾನಕ್ಕಾಗಿ ಹೇಳಿದ. ಗಂಡನ ಮಾತು ಕೇಳಿ ಪದ್ಮಾವತಿ ಕಾಂಟ್ರಕ್ಟರ್‌ನಿಂದ ಮಾಮೂಲಿ ದೊರೆತಷ್ಟೆ ಖುಷಿಗೊಂಡಳು. ಅದೇ ಖುಷಿಯಲ್ಲಿ ಗಂಡನಿಗೆ ಪ್ರೀತಿಯಿಂದ ದಿನಕ್ಕಿಂತ ಒಂದಿಷ್ಟು ಹೆಚ್ಚೆ ಊಟ ಬಡಿಸಿದಳು.

ಈ ನಡುವೆ ಮಾತಿನ ಭರಾಟೆಯಲ್ಲಿ ಅದುವರೆಗೂ ಮರೆತುಹೋಗಿದ್ದ ವಾಸನೆಯ ನೆನಪು ಮತ್ತೆ ಮರುಕಳಿಸಿ ಚಿದಂಬರ ಮೂಗಿನ ಎರಡೂ ಹೊಳ್ಳೆಗಳನ್ನು ಅಗಲಿಸಿ ಆಘ್ರಾಣಿಸಿದ. ಅಚ್ಚರಿ ಎನ್ನುವಂತೆ ಇಡೀ ದಿನ ತನ್ನ ಕುತೂಹಲಕ್ಕೆ ಕಾರಣವಾದ ಆ ವಿಚಿತ್ರ ವಾಸನೆ ತನ್ನ ಅಸ್ತಿತ್ವವೆ ಇಲ್ಲದಂತೆ ಮಾಯವಾಗಿತ್ತು. ಚಿದಂಬರ ಮತ್ತೆ ಮತ್ತೆ ಆಘ್ರಾಣಿಸಿದ. ಅನುಮಾನ ಬಂದು ಹೆಜ್ಜೆ ಸಪ್ಪಳವಾಗದಂತೆ ನಡೆದು ಹೆಂಡತಿಯ ಹಿಂದೆ ನಿಂತು ದೀರ್ಘವಾಗಿ ಉಸಿರೆಳೆದುಕೊಂಡವನಿಗೆ ಕಳೆದ ಹತ್ತು ವರ್ಷಗಳಿಂದ ತನಗೆ ಪರಿಚಿತವಿರುವ ದೇಹದ ವಾಸನೆ ಹೊರತು ಬೇರೆ ಯಾವ ವಾಸನೆಯೂ ಮೂಗಿಗೆ